(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾವು ಈ ಕಡೆ ತಿರುಗಿ ಮಾತನಾಡ ಬೇಕಾಗಿದೆ, ಶಾಸಕರು ಇಲ್ಲ ಮಂತ್ರಿಗಳು ಇಲ್ಲ ಇನ್ನು ಅಲ್ಲಿ ಏನು ಇದೆ. ಏನೂ ಇಲ್ಲ

ಅಧ್ಯಕ್ಷರು : ನಾಳೆಯಿಂದ ತುಂಬಿರುತ್ತಾರೆ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಕ್ಕರೆ ಸಚಿವರೇ ತಾವು ಹೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ವಾಟಾಳ್ ನಾಗರಾಜ್, ನಿಮ್ಮ ಭಾಗದಲ್ಲಿ ಕುಳಿತಿರುವವರು ಕೆಲವರು ನಮ್ಮವರಿದ್ದಾರೆ. ಅವರೆಲ್ಲಾ ಇಲ್ಲವೆ? ನಮ್ಮವರು ಕೈ ಎತ್ತಿ.

ಅಧ್ಯಕ್ಷರು : ಬಹಳ ಜನ ಮಾತನಾಡುವವರು ಇರುವುದರಿಂದ ವಾಟಾಳ್ ನಾಗರಾಜ್‌ರವರೆ ಮುಂದಕ್ಕೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಈ ಕಡೆ ಕುಳಿತಿರುವವರಲ್ಲಿ ಕೆಲವರು ನಮ್ಮ ಕಡೆ ಇದ್ದಾರೆಂದು ಹೇಳಿದಿರಿ ಆ ಕಡೆಯು ಇದ್ದಾರೆ ಈ ಕಡೆಯು ಇದ್ದಾರೆ.

ಶ್ರೀ ಸಿದ್ದರಾಮಯ್ಯ : ನೀವು ಆತ್ಮಸಾಕ್ಷಿಯಾಗಿ ಹೇಳಿ ನೀವು ನಮ್ಮ ಪರ ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ನಾವು ನೀವು ಬಹಳ ಸ್ನೇಹಿತರು, ನಿಮ್ಮ ಪರವಾಗಿ ನಾನು ಯಾವಾಗಲೂ ಅದರ ಬಗ್ಗೆ ಏನು ತಕರಾರು ಇಲ್ಲ. ಇದಕ್ಕೆ ಆತ್ಮಸಾಕ್ಷಿ ಏಕೆ ಬೇಕು. ಎದುರಿಗೆ ಸಾಕ್ಷಿ ಮಾಡೋಣ. ಆತ್ಮಸಾಕ್ಷಿ ಏನು ಬೇಡ. ನಾವು ನಿಮ್ಮ ಪರವಾಗಿಯೇ? ಆದರೆ ಇದು ಒಳ್ಳೆಯ ರೀತಿಯ ಸಂಪ್ರದಾಯವಲ್ಲ.

ವಿಷಯ : ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಪ್ರಕಟವಾಗಿರುವ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅದು ತೃಪ್ತಿಕರವಾಗಿ ಇಲ್ಲ. ಮೊನ್ನೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ಸ್ಟೇಟ್‌ಮೆಂಟ್ ಬಂದಿತ್ತು. State's Lesson : crack down on english - Educution inspectors raid kannada primary schools, seize English alphabet books. ಆದರೆ ನಾನು ಪ್ರಶ್ನೆಯಲ್ಲಿ ಕೇಳಿದ್ದೆ ಅಲ್ಲಿರುವ ಪುಸ್ತಕವನ್ನು ಸೀಜ್ ಮಾಡಿಕೊಂಡು ಹೋಗಿದ್ದಾರೆ ಅದರೆ ಸರ್ಕಾರ ಉತ್ತರ ಕೊಟ್ಟಿದೆ, ನಾವು ಯಾವ ವರ್ಣಮಾಲೆಯ ಪುಸ್ತಕಗಳನ್ನು ವಶಪಡಿಸಿಕೊಂಡಿಲ್ಲ, 92 ಶಾಲೆಗಳಿಗೆ ಭಾಷಾ ನೀತಿಯನ್ನು ಉಲ್ಲಂಘನೆ ಮಾಡಿರುವ ಬಗ್ಗೆ ನೋಟೀಸ್ ಕೊಟ್ಟಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಕನ್ನಡ ಮಾಧ್ಯಮದ ಶಾಲೆಗಳಿಗೆ ಹೋಗುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಅಲ್ಲಿ ಏನು ಸರ್ಕಾರ ದುಡ್ಡು ಖರ್ಚು ಮಾಡುತ್ತಿಲ್ಲ. ಅಲ್ಲಿ ಅವರೇ ಇಂಗ್ಲೀಷ್ ಆಲ್ಫಾಬೆಟ್ಸ್‌ನ್ನು ಕಲಿಸುತ್ತಾರೆ ಇವರಿಗೆ ಅಲ್ಲಿ ಹೋಗಿ ನೋಟೀಸ್ ಕೊಡುವಂಥ ಅಗತ್ಯತೆ ಏನಿತ್ತು ಸರ್ಕಾರಿ ಅಧಿಕಾರಿಗಳು ಎಲ್ಲಾ ಆದೇಶಗಳನ್ನು ಕನ್ನಡದಲ್ಲಿ ಮಾಡುತ್ತಾರೆಯೆ? ಮಾಡುತ್ತಿಲ್ಲ. ಸರ್ಕಾರದ ಅಧಿಕಾರಿಗಳು ತಪ್ಪು ಮಾಡಿದ್ದನ್ನು ಯಾರೂ ಕೇಳುವವರು ಇಲ್ಲ ಆದರೆ ಜನತೆ ತಪ್ಪು ಮಾಡಿದರೆ ಸರ್ಕಾರ ಕೇಳುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಮೊನ್ನೆ ಮೈಸೂರಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ ಶಾಲೆಗಳಲ್ಲಿ ಇಂಗ್ಲೀಷನ್ನು ಕಲಿಸುವಂಥ ಪ್ರಯತ್ನ ಮಾಡುತ್ತೇವೆಂದು ಹೇಳಿರುತ್ತೀರಿ. ಅದು ಪತ್ರಿಕೆಯಲ್ಲಿ ಬಂದಿತ್ತು ಅದನ್ನು ಬಿಟ್ಟು ಇವರು ಶಾಲೆಗಳಲ್ಲಿ ಶಾಲೆಯವರು ಮಕ್ಕಳಿಗೆ ಆಲ್ಫಾಬೆಟ್ಸ್‌ನ್ನು ಕಲಿಸುವಾಗ ಪುಸ್ತಕಗಳನ್ನು ಸೀಜ್ ಮಾಡಿಸುವುದು, ನೋಟೀಸನ್ನು ಕೊಡಿಸುವಂಥದ್ದು ಸರಿಯಾದುದಲ್ಲ ತಾವು ಹೇಳಿರುವ ಪತ್ರಿಕಾ ಹೇಳಿಕೆಯನ್ನು ನಾನು ಓದಿರುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿರುವ ನ್ಯೂಸ್ ಅಲ್ಲವೇ? ಇದರ ಬಗ್ಗೆ ಸರ್ಕಾರ ಉತ್ತರ ಕೊಟ್ಟಿದೆ ಮಾನ್ಯ ಸದಸ್ಯರು ಈ ಉತ್ತರ ಸಮರ್ಪಕವಾಗಿ ಇಲ್ಲವೆಂದು ಹೇಳುತ್ತಿದ್ದಾರೆ ಮತ್ತೊಮ್ಮೆ ಅಧಿಕಾರಿಗಳನ್ನು ಕರೆಸಿ ಮಾತನಾಡಿ ಅಲ್ಲಿ ಏನು ನಡೆದಿದೆ ಎನ್ನುವುದನ್ನು ತಿಳಿದುಕೊಂಡು ಸರಿಯಾದ ಉತ್ತರವನ್ನು ಕೊಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಆ ಅಧಿಕಾರಿಯ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಉತ್ತರ ಹೇಳಿದ್ದಾರೆ. ಒಂದು ವೇಳೆ ಕ್ರಮವನ್ನು ತೆಗೆದುಕೊಂಡಿದ್ದರೆ ಸೀಜ್ ಮಾಡಿಲ್ಲವೆಂದು ಏಕೆ ಉತ್ತರ ಹೇಳುವುದು ಆ ಎರಡು ವಿಷಯ ಸ್ವಲ್ಪ ಗೊಂದಲವಿದೆ, ಅದರ ಬಗ್ಗೆ ನನಗೆ ಮಾಹಿತಿಯನ್ನು ಕೊಡಿಸಬೇಕು.

ಶ್ರೀ ಸಿದ್ದರಾಮಯ್ಯ : ಆಯಿತು ಹೇಳುತ್ತೇನೆ.

ವಿಷಯ : ಮಲೆನಾಡು ಪ್ರದೇಶದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳ ನಡವಳಿಕೆ ಬಗ್ಗೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ಮಲೆನಾಡಿನ ಪ್ರದೇಶದಲ್ಲಿರುವವರು, ಕಾಡಿನ ಮಧ್ಯದಲ್ಲಿ ನಮ್ಮೆಲ್ಲ ಊರುಗಳು, ದೇವರು ನಮ್ಮನ್ನು ಅಲ್ಲಿ ಏಕೆ ಸೃಷ್ಟಿ ಮಾಡಿದನೊ ನಮಗೇನು ಗೊತ್ತಿಲ್ಲ. ನಿಮ್ಮ ಅರಣ್ಯ ಇಲಾಖೆಯವರು ನಡೆದುಕೊಳ್ಳುವ ನಡವಳಿಕೆಯನ್ನು ನೋಡಿದಾಗ, ನಮಗೆ ಈ ಭಾವನೆ ನಿಜವಾಗಲೂ ಕೂಡ ಬರುತ್ತದೆ, ನಮ್ಮ ಮಲೆನಾಡಿನಲ್ಲಿ ಹುಟ್ಟಿದವರಿಗೆ, ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಲ್ಲಿ ಸರ್ಕಾರ 127 ಹಳ್ಳಿಗಳಿಗೆ ವಿದ್ಯುದ್ದೀಕರಣ ಮಾಡುವುದಕ್ಕೆ ಹಣವನ್ನು ಮಂಜೂರು ಮಾಡಿದೆ. ಹೊಸನಗರ ತಾಲ್ಲೂಕಿಗೆ, ತೀರ್ಥಹಳ್ಳಿ ತಾಲ್ಲೂಕಿಗೆ, ಆದರೆ ನಿಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳು, ಕಂಬವನ್ನು ಹುಗಿಯಬೇಡಿ ಎಂದು ಹೇಳುತ್ತಿದ್ದಾರೆ. ನಮ್ಮ ಊರಿಗೆ ವಿದ್ಯುತ್ ಹೋಗಬೇಕಾದರೆ ಅರಣ್ಯ ಇಲಾಖೆಯ ಜಾಗದಲ್ಲಿ ಕಂಬವನ್ನು ಹುಗಿದುಕೊಂಡು ಲೈನ್ ಎಳೆದುಕೊಂಡು ಹೋಗಬೇಕು. ಅರಣ್ಯ ಒಳಗಡೆ ಊರುಗಳು ಇವೆ. ಒಂದೂ ಕಂಬವನ್ನು ನೆಡುವುದಕ್ಕೆ ಬಿಡುವುದಿಲ್ಲ, ನಾವು ಮರ ಮತ್ತು ರೆಂಬೆಯನ್ನು ಕಡಿಯುವುದಿಲ್ಲವೆಂದು ಹೇಳಿದರೂ ಕೂಡ ಕಂಬ ನೆಡುವ ಜಾಗ ನಮ್ಮದು ಎಂದು ಆ ಡಿ.ಎಫ್.ಒ. ರವರು ಹೇಳುತ್ತಾರೆ. ಸಾಗರದಲ್ಲಿ ಒಬ್ಬ ಹೆಣ್ಣು ಮಗಳು ಡಿಎಫ್ಒ ಇದ್ದಾರೆ, ಅವರಿಗೆ ಏನಾಗಿದೆ ಎಂದು ಗೊತ್ತಿಲ್ಲ. ಕಾಮನ್‌ಸೆನ್ಸ್ ಕೂಡ ಇಲ್ಲವೆ ಎಂದು ಹೇಳಿ ಐಎಫ್ಎಸ್ ಮಾಡಿಕೊಂಡು ಅಧಿಕಾರಿಗಳು ಬರುತ್ತಾರೆ. ಕಾಮನ್‌ಸೆನ್ಸ್ ಇಲ್ಲದಿದ್ದರೆ ಯಾವ ರೀತಿಯ ಅಧಿಕಾರಿಗಳು ಇವರು ಎಂದು ಗೊತ್ತಾಗುವುದಿಲ್ಲ. ಇವತ್ತು ಕಾಡು ಉಳಿದಿರತಕ್ಕಂಥದ್ದು ನಿಮ್ಮ ಅಧಿಕಾರಿಗಳಿಂದ ಅಲ್ಲ, ಕಾಡು ಉಳಿದಿರತಕ್ಕಂಥದ್ದು ನಮ್ಮ ಜನರಿಂದ, ಮಲೆನಾಡಿನಲ್ಲಿ ಹುಟ್ಟಿರತಕ್ಕಂಥ ಜನರಿಂದ, ನಾವು ಮರ ಕಡಿಯುವುದನ್ನು